## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮ್ಯಾನ್ ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ ಮತ್ತು ತೆರೆದ ಚರಂಡಿಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಮಕ್ಕಳಿಗೆ ಒಂದು ಬಾರಿಯ ಧನ ಸಹಾಯವನ್ನು ನಿಗಧಿಪಡಿಸುವ ಕುರಿತು.

**ಓದಲಾಗಿದೆ:** ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ, ಆಯೋಗ ಇವರ ಏಕ ಕಡತ ಸಂಖ್ಯೆ: KSCSK/ MS13/ OTH/1/2024, E-1303092

******

**ಪ್ರಸ್ತಾವನೆ:-**

ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಇವರು ಮ್ಯಾನ್ ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ ಮತ್ತು ತೆರೆದ ಚರಂಡಿಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಮಕ್ಕಳಿಗೆ ಒಂದು ಬಾರಿಯ ಧನ ಸಹಾಯವನ್ನು ನಿಗಧಿಪಡಿಸುವ ಕುರಿತು ಮೇಲೆ ಓದಲಾದ ಏಕ ಕಡತದಲ್ಲಿ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 8928/2020ರ Daily Order Dated:04.10.2021ರಲ್ಲಿ ಈ ಕೆಳಕಂಡಂತೆ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

> Learned counsel for the petitioner has also pointed out that in some of the cases Rs.10,000/- has been given towards education and scholarship. Page No.7 of the report submitted by the State Government reflects the same. Again in the report that Rs.10,000/- is per year, per month or one time measure is not clear. The 'scholarship' in terms of the Act of 2013 certainly means that the State Government is under an obligation to pay scholarship to the children of the deceased as it is being paid by the Central Government and State Government in respect of other schemes. The disparity of paying scholarship has to come to an end and uniform policy has to be made in respect of grant of scholarship in all such cases. Therefore, the State Government is granted 30 days' time to formulate the scheme in terms of the Act of 2013 in the matter of grant of scholarship as well as grant of alternative profession/job.

ರಾಜ್ಯ ಸರ್ಕಾರವು ಒಂದರಿಂದ ಹತ್ತನೇ ತಗರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಕೇಂದ್ರ ಪುರಸ್ಕೃತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಆದರೆ, ಸದರಿ ಕೇಂದ್ರ ಪುರಸ್ಕೃತ ವಿದ್ಯಾರ್ಥಿ ವೇತನ ಕಾರ್ಯಕ್ರಮದಲ್ಲಿ ಈ ರೀತಿಯಾಗಿ ಮೃತಪಟ್ಟ ಕಾರ್ಮಿಕರ ಅವಲಂಬಿತ ಮಕ್ಕಳಿಗೆ ಯಾವುದೇ ವಿಶೇಷ ಯೋಜನೆಯಾಗಲೀ ಅಥವಾ ವಿಶೇಷ ಸವಲತ್ತಿನ ಅಂಶ ಒಳಗೊಂಡಿರುವುದಿಲ್ಲ.

S.Y 05/03/2024

ಎಂ.ಎಸ್.ಕಾಯ್ದೆ ಮತ್ತು ನಿಯಮಗಳು 2013ರ ಸೆಕ್ಷನ್ 13 (1)(ಬಿ)ರಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವ್ಯಕ್ತಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ಕಲ್ಪಿಸಲು ಅವಕಾಶ ಇರುತ್ತದೆ. ಸದರಿ ಕಾಯ್ದೆ ಸಂಬಂಧ ಸಮಾಜ ಕಲ್ಯಾಣ ಇಲಾಖೆಯೇ ನೋಡಲ್ ಇಲಾಖೆ ಆಗಿರುವುದರಿಂದ ಮ್ಯಾನ್ ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ ಮತ್ತು ತೆರೆದ ಚರಂಡಿಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಡುವ ಎಲ್ಲಾ ಧರ್ಮ ಮತ್ತು ಜಾತಿಯ ಕಾರ್ಮಿಕರ ಮಕ್ಕಳಿಗೆ ಈ ಕೆಳಕಂಡಂತೆ ಏಕರೂಪ ವಿದ್ಯಾರ್ಥಿ ವೇತನವನ್ನು ಅವರವರು ವ್ಯಾಸಂಗ ಮಾಡುತ್ತಿರುವ ತರಗತಿಗೆ ಅನುಗುಣವಾಗಿ ಮಂಜೂರು ಮಾಡಲು ಸರ್ಕಾರದಿಂದ ಸೂಕ್ತ ಆದೇಶ ಹಾಗೂ ಮಾರ್ಗಸೂಚಿ ಹೊರಡಿಸಲು ಕೋರಿರುತ್ತಾರೆ.

| **ವಿಷಯ** | **ತರಗತಿ** | **ವಿದ್ಯಾರ್ಥಿ ವೇತನದ ಮೊತ್ತ** |
|---|---|---|
| ಮೆಟ್ರಿಕ್ ಪೂರ್ವ | 1 ರಿಂದ 5 | 5000/- |
| | 6 ರಿಂದ 10 . | 10,000/- |
| ಮೆಟ್ರಿಕ್ ನಂತರ | PUC ನಂತರದ ಎಲ್ಲಾ ಕೋರ್ಸುಗಳಿಗೆ | 15,000/- |

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಮ್ಯಾನ್ ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ ಮತ್ತು ತೆರೆದ ಚರಂಡಿಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಮಕ್ಕಳಿಗೆ ಒಂದು ಬಾರಿಯ ಧನ ಸಹಾಯವನ್ನು ನಿಗಧಿಪಡಿಸಲು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : SWD/23/SDC/2024, ಬೆಂಗಳೂರು**

**ದಿನಾಂಕ:05-03-2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮ್ಯಾನ್ ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ ಮತ್ತು ತೆರೆದ ಚರಂಡಿಗಳಲ್ಲಿ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕಾರ್ಮಿಕರ ಅವಲಂಬಿತ ಮಕ್ಕಳಿಗೆ ಒಂದು ಬಾರಿಯ ಧನ ಸಹಾಯವನ್ನು ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

| **ಕ್ರ. ಸಂ** | **ವಿದ್ಯಾರ್ಥಿಗಳಿಗೆ ತರಗತಿವಾರು** | **ಮಂಜೂರು ಮಾಡಿದ ಧನ ಸಹಾಯದ ಮೊತ್ತ ರೂ. (One time assistance to each Students)** |
|---|---|---|
| 1 | 1 ರಿಂದ 10 ನೇ ತರಗತಿ | 15,000/- |
| 2 | I-II PUC and Equivalent Courses | 20,000/- |
| 3 | ಪದವಿ ಮತ್ತು ಸ್ನಾತಕೋತ್ತರ ಪದವಿ (ವೃತ್ತಿಪರ ಕೋರ್ಸು ಸೇರಿದಂತೆ) | 25,000/- |

**ಷರತ್ತುಗಳು:-**

1. ಒಂದು ಬಾರಿಯ ಧನ ಸಹಾಯ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಪಾವತಿಸತಕ್ಕದ್ದು.

S.V
05/03/2024

2. ಮೃತರ ಮರಣ ಪ್ರಮಾಣಪತ್ರ ಹಾಗೂ ಅವಲಂಬಿತ ವಿದ್ಯಾರ್ಥಿಗಳ ಮಾಹಿತಿಗಳನ್ನು ಜಂಟಿ /ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ಸಂಗ್ರಹಿಸಿ ನೇರವಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ರವರಿಗೆ ನೇರವಾಗಿ ಸಲ್ಲಿಸುವುದು.
3. ಸದರಿ ಯೋಜನೆಯಡಿ ಮೃತ ಕಾರ್ಮಿಕರ ಜಾತಿ ಮತ್ತು ಕುಟುಂಬದ ಆದಾಯವನ್ನು ಪರಿಗಣನೆಗೆ ತೆಗೆದುಕೊಳ್ಳುವಂತಿಲ್ಲ. ಕೇವಲ ಮರಣ ಸಮರ್ಥನಾ ಪತ್ರ ಹಾಗೂ ಅವಲಂಬಿತ ಪ್ರಮಾಣ ಪತ್ರದ ಮೇಲೆ ಸವಲತ್ತನ್ನು ಮಂಜೂರು ಮಾಡುವುದು.
4. ಮೃತಪಟ್ಟ ಕಾರ್ಮಿಕರ ಮಕ್ಕಳಿಗೆ ಮಾತ್ರ ಪರಿಮಿತಿಗೊಳಿಸಿ, ಒಂದು ಬಾರಿಗೆ ಮಾತ್ರ ಸಹಾಯಧನವನ್ನು ಮಂಜೂರು ಮಾಡುವುದು. ಮೃತರ ಸಹೋದರ ಅಥವಾ ಸಹೋದರಿಯ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ.
5. ಮೃತರಿಗೆ ಶಾಲಾ ಕಾಲೇಜಿಗೆ ಹೋಗುತ್ತಿರುವ ಮಕ್ಕಳಿದ್ದಲ್ಲಿ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.
6. ಮೃತ ಕಾರ್ಮಿಕರಿಗೆ ಒಂದಕ್ಕಿಂತ ಹೆಚ್ಚು ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಇದ್ದಲ್ಲಿ, ಎಲ್ಲಾ ಮಕ್ಕಳು ಈ ಯೋಜನೆ ಅಡಿ ಒಂದು ಬಾರಿಯ ಸಹಾಯಧನಕ್ಕೆ ಅರ್ಹತೆ ಪಡೆದಿರುತ್ತಾರೆ.
7. ಜಂಟಿ /ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯಿಂದ ಮೃತರ ಅವಲಂಬಿತ ವಿದ್ಯಾರ್ಥಿಗಳ ಮಾಹಿತಿಯಂತೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ನೇರವಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ರವರು ಜಮ ಮಾಡುವುದು.
8. ಈ ಕಾರ್ಯಕ್ರಮದಡಿ ಸಹಾಯ ಪಡೆದ ವಿದ್ಯಾರ್ಥಿಗಳು ವಿವಿಧ ಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಿಂದ ದೊರೆಯುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬೋಧನಾ ಶುಲ್ಕ ಸೇರಿದಂತೆ ವಿದ್ಯಾರ್ಥಿ ವೇತನಕ್ಕೆ ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kalavathi S.V
05/03/2024
(ಕಲಾವತಿ ಎಸ್.ವಿ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಸಂತನಗರ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ವಸಂತನಗರ, ಬೆಂಗಳೂರು

6. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಬೆಂಗಳೂರು.
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
10. ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
11. ಎಲ್ಲಾ ಜಿಲ್ಲೆಯ ಜಂಟಿ/ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ
12. ಎಲ್ಲಾ ಜಿಲ್ಲೆಯ ತಾಲೂಕಿನ ತಹಸೀಲ್ದಾರ್‌ಗಳು.
13. ಎಲ್ಲಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ/ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ (ಕ್ರ.ಸಂ.9 ರಿಂದ 13 ರವರೆಗೆ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ಇವರ ಮುಖಾಂತರ)
14. ಮುಖ್ಯ ಲೆಕ್ಕಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ಯವನಿಕ, ನೃಪತುಂಗ ರಸ್ತೆ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

***